# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 1048 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 23-02-2024 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಿಂದ ಇಲಾಖೆಯವತಿಯಿಂದ ಇಲ್ಲಿಯವರೆಗೂ ಪದವಿ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಎಷ್ಟು ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ: (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) | ಕಳೆದ 5 ವರ್ಷಗಳಿಂದ ಇಲಾಖೆಯ ವತಿಯಿಂದ ಇಲ್ಲಿಯವರೆಗೂ ಪದವಿ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಿದೆ.<br><br>2018-19ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿ ರೂ.110.09 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, 2,88,019 ಪದವಿ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ.76.91 ಕೋಟಿಗಳ ವಿದ್ಯಾರ್ಥಿವೇತನವನ್ನು ಪಾವತಿಸಲಾಗಿರುತ್ತದೆ.<br><br>2019-20ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ರೂ.72.19ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು 193516 ಪದವಿ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ.52.58 ಕೋಟಿಗಳ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನವನ್ನು ಪಾವತಿಸಲಾಗಿರುತ್ತದೆ.<br><br>2020-21ನೇ ಸಾಲಿನಲ್ಲಿ ಕೋವಿಡ್-19 ಹಿನ್ನೆಲೆಯಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಿರುವುದಿಲ್ಲ. ಈ ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನ ರೂ. 140.00 ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ಹಿಂವಕ 322 ಬಿಎಂಎಸ್ 2021 ದಿನಾಂಕ:03-07-2021 ರಂತೆ 7,84,464 ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ನಿಡಲಾಗಿರುತ್ತದೆ.<br><br>2021-22ನೇ ಸಾಲಿನಲ್ಲಿ ಕೋವಿಡ್-19 ಹಿನ್ನೆಲೆಯಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಿರುವುದಿಲ್ಲ. ಈ ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನ ರೂ.50.00 ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಹಿಂವಕ 323 ಬಿಎಂಎಸ್ 2022, ದಿನಾಂಕ: 29-04-2022ರಂತೆ 8,49,296 ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ನಿಡಲಾಗಿರುತ್ತದೆ.<br><br>2022-23ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮದಡಿ ರೂ.74.29 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು, ಸದರಿ ಅನುದಾನದಲ್ಲಿ ರೂ.55.25 ಕೋಟಿಗಳ ಅನುದಾನವನ್ನು1,94,061 ಪದವಿ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಪಾವತಿಸಲಾಗಿರುತ್ತದೆ. |

| | | |
|---|---|---|
| ಆ) | ವಿದ್ಯಾರ್ಥಿ ವೇತನಕ್ಕಾಗಿ ಎಷ್ಟು ಅರ್ಜಿಗಳು ರಾಜ್ಯದ್ಯಾಂತ ಸಂಗ್ರಹವಾಗಿದೆ; ವಿದ್ಯಾರ್ಥಿ ವೇತನ ನೀಡಬೇಕಾದರೆ ಸರ್ಕಾರ ನಿಗದಿಪಡಿಸಿರುವ ಮಾನದಂಡ ಏನು | 2023-24ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮದಡಿ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: 15-02-2024ರಂದು ನಿಗದಿಪಡಿಸಲಾಗಿರುತ್ತದೆ. ಪ್ರಸ್ತುತ 6,83,176 ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಿರುತ್ತಾರೆ.<br><br>ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಾನದಂಡಗಳ ಕುರಿತ ಸರ್ಕಾರಿ ಆದೇಶಗಳನ್ನು **ಅನುಬಂಧ-2**ರಲ್ಲಿ ನೀಡಿದೆ. |
| ಇ) | 2022-23ನೇ ಸಾಲಿನಲ್ಲಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ ಒಂದು ವರ್ಷವಾದರೂ ವಿದ್ಯಾರ್ಥಿ ವೇತನ ನೀಡದಿರುವುದರಿಂದ ವಿದ್ಯಾರ್ಥಿಗಳಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದು ಸಾರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರದ ಕ್ರಮವೇನು? | 2022-23ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ರೂ.74.29 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು 3,11,738 ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಪಾವತಿಸಲಾಗಿರುತ್ತದೆ. |

**ಸಂಖ್ಯೆ: ಬಿಸಿಡಬ್ಲ್ಯೂ 204 ಬಿಎಂಎಸ್ 2024**

**(ಶಿವರಾಜ .ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1048ಕ್ಕೆ ಅನುಬಂಧ-1

**2018-19 ನೇ ಸಾಲಿನಲ್ಲಿ ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ಪಾವತಿಸಿದ ವಿದ್ಯಾರ್ಥಿಗಳ ವಿವರ (ಜಿಲ್ಲಾವಾರು )**

| ಕ್ರಮ ಸಂ | ಜಿಲ್ಲೆ | ವಿದ್ಯಾರ್ಥಿ ವೇತನ ಪಾವತಿಸಿದ ವಿದ್ಯಾರ್ಥಿಗಳ ಸಂಖ್ಯೆ | ಪಾವತಿಸಿದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಬಾಗಲಕೋಟೆ | 8457 | 202.15 |
| 2 | ಬೆಂಗಳೂರು ಗ್ರಾಮಾಂತರ | 3656 | 100.86 |
| 3 | ಬೆಂಗಳೂರು ನಗರ | 47546 | 1520.91 |
| 4 | ಬೆಳಗಾವಿ | 21236 | 533.13 |
| 5 | ಬಳ್ಳಾರಿ | 10336 | 267.89 |
| 6 | ಬೀದರ್ | 6265 | 158.78 |
| 7 | ವಿಜಯಪುರ | 11892 | 282.48 |
| 8 | ಚಾಮರಾಜನಗರ | 2248 | 53.23 |
| 9 | ಚಿಕ್ಕಬಳ್ಳಾಪುರ | 4445 | 114.70 |
| 10 | ಚಿಕ್ಕಮಗಳೂರು | 3810 | 98.38 |
| 11 | ಚಿತ್ರದುರ್ಗ | 4323 | 110.05 |
| 12 | ದಕ್ಷಿಣಕನ್ನಡ | 14647 | 416.10 |
| 13 | ದಾವಣಗೆರೆ | 8247 | 228.19 |
| 14 | ಧಾರವಾಡ | 11662 | 310.53 |
| 15 | ಗದಗ | 6862 | 171.78 |
| 16 | ಕಲಬುರ್ಗಿ | 14545 | 378.60 |
| 17 | ಹಾಸನ | 10117 | 261.53 |
| 18 | ಹಾವೇರಿ | 6384 | 149.10 |
| 19 | ಕೊಡಗು | 1821 | 48.12 |
| 20 | ಕೋಲಾರ | 3828 | 93.20 |
| 21 | ಕೊಪ್ಪಳ | 4598 | 107.56 |
| 22 | ಮಂಡ್ಯ | 10249 | 277.87 |
| 23 | ಮೈಸೂರು | 19225 | 518.22 |
| 24 | ರಾಯಚೂರು | 6276 | 152.70 |
| 25 | ರಾಮನಗರ | 3798 | 92.81 |
| 26 | ಶಿವಮೊಗ್ಗ | 9760 | 249.08 |
| 27 | ತುಮಕೂರು | 11221 | 300.79 |
| 28 | ಉಡುಪಿ | 9075 | 225.82 |
| 29 | ಉತ್ತರಕನ್ನಡ | 7090 | 163.92 |
| 30 | ಯಾದಗಿರಿ | 4400 | 102.59 |
| | ಒಟ್ಟು | **288019** | **7691.06** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1048ಕ್ಕೆ ಅನುಬಂಧ -1

**2019-20 ನೇ ಸಾಲಿನಲ್ಲಿ ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ಪಾವತಿಸಿದ ವಿದ್ಯಾರ್ಥಿಗಳ ವಿವರ (ಜಿಲ್ಲಾವಾರು )**

| ಕ್ರಮ ಸಂ | ಜಿಲ್ಲೆ | ವಿದ್ಯಾರ್ಥಿ ವೇತನ ಪಾವತಿಸಿದ ವಿದ್ಯಾರ್ಥಿಗಳ ಸಂಖ್ಯೆ | ಪಾವತಿಸಿದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಬಾಗಲಕೋಟೆ | 6183 | 153.00 |
| 2 | ಬೆಂಗಳೂರು ಗ್ರಾಮಾಂತರ | 2667 | 77.09 |
| 3 | ಬೆಂಗಳೂರು ನಗರ | 24533 | 804.48 |
| 4 | ಬೆಳಗಾವಿ | 16001 | 401.08 |
| 5 | ಬಳ್ಳಾರಿ | 7192 | 194.22 |
| 6 | ಬೀದರ್ | 4402 | 115.62 |
| 7 | ವಿಜಯಪುರ | 8216 | 197.68 |
| 8 | ಚಾಮರಾಜನಗರ | 1596 | 39.06 |
| 9 | ಚಿಕ್ಕಬಳ್ಳಾಪುರ | 3067 | 82.18 |
| 10 | ಚಿಕ್ಕಮಗಳೂರು | 2701 | 72.78 |
| 11 | ಚಿತ್ರದುರ್ಗ | 2969 | 81.94 |
| 12 | ದಕ್ಷಿಣಕನ್ನಡ | 9994 | 292.51 |
| 13 | ದಾವಣಗೆರೆ | 5426 | 153.82 |
| 14 | ಧಾರವಾಡ | 7767 | 212.01 |
| 15 | ಗದಗ | 4792 | 123.12 |
| 16 | ಕಲಬುರ್ಗಿ | 9497 | 255.71 |
| 17 | ಹಾಸನ | 7269 | 193.98 |
| 18 | ಹಾವೇರಿ | 4864 | 114.47 |
| 19 | ಕೊಡಗು | 1170 | 32.22 |
| 20 | ಕೋಲಾರ | 2892 | 72.67 |
| 21 | ಕೊಪ್ಪಳ | 3053 | 74.54 |
| 22 | ಮಂಡ್ಯ | 7786 | 216.03 |
| 23 | ಮೈಸೂರು | 13762 | 377.01 |
| 24 | ರಾಯಚೂರು | 4975 | 128.01 |
| 25 | ರಾಮನಗರ | 2390 | 61.56 |
| 26 | ಶಿವಮೊಗ್ಗ | 6646 | 173.77 |
| 27 | ತುಮಕೂರು | 7684 | 216.09 |
| 28 | ಉಡುಪಿ | 6002 | 152.35 |
| 29 | ಉತ್ತರಕನ್ನಡ | 4975 | 117.53 |
| 30 | ಯಾದಗಿರಿ | 3045 | 72.28 |
| | ಒಟ್ಟು | **193516** | **5258.83** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1048ಕ್ಕೆ ಅನುಬಂಧ

2022-23 ನೇ ಸಾಲಿನಲ್ಲಿ ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ಪಾವತಿಸಿದ ವಿದ್ಯಾರ್ಥಿಗಳ ವಿವರ (ಜಿಲ್ಲಾವಾರು )

| ಕ್ರ.ಸಂ | ಜಿಲ್ಲೆ | ವಿದ್ಯಾರ್ಥಿವೇತನ ಪಾವತಿಸಿದ ವಿದ್ಯಾರ್ಥಿಗಳ ಸಂಖ್ಯೆ | ಪಾವತಿಸಿದ ಮೊತ್ತ (ರೂಲಕ್ಷಗಳಲ್ಲಿ) |
|---|---|---|---|
| 1 | ಬಾಗಲಕೋಟೆ | 5138 | 132.56 |
| 2 | ಬಳ್ಳಾರಿ | 4176 | 119.72 |
| 3 | ಬೆಳಗಾವಿ | 9420 | 264.53 |
| 4 | ಬೆಂಗಳೂರು ಗ್ರಾಮಾ | 2633 | 78.24 |
| 5 | ಬೆಂಗಳೂರು ನಗರ | 52974 | 1650.66 |
| 6 | ಬೀದರ್ | 5294 | 141.27 |
| 7 | ಚಾಮರಾಜನಗರ | 1362 | 33.07 |
| 8 | ಚಿಕ್ಕಬಳ್ಳಾಪುರ | 2857 | 78.23 |
| 9 | ಚಿಕ್ಕಮಗಳೂರು | 1874 | 49.11 |
| 10 | ಚಿತ್ರದುರ್ಗ | 2163 | 54.85 |
| 11 | ದಕ್ಷಿಣಕನ್ನಡ | 9188 | 281.24 |
| 12 | ದಾವಣಗೆರೆ | 7149 | 202.13 |
| 13 | ಧಾರವಾಡ | 6037 | 171.38 |
| 14 | ಗದಗ | 3075 | 83.86 |
| 15 | ಹಾಸನ | 4412 | 124.96 |
| 16 | ಹಾವೇರಿ | 1951 | 48.85 |
| 17 | ಕಲಬುರ್ಗಿ | 9854 | 263.02 |
| 18 | ಕೊಡಗು | 914 | 25.67 |
| 19 | ಕೋಲಾರ | 2277 | 56.27 |
| 20 | ಕೊಪ್ಪಳ | 2665 | 66.80 |
| 21 | ಮಂಡ್ಯ | 5361 | 154.13 |
| 22 | ಮೈಸೂರು | 15534 | 457.55 |
| 23 | ರಾಯಚೂರು | 4631 | 119.80 |
| 24 | ರಾಮನಗರ | 2489 | 64.76 |
| 25 | ಶಿವಮೊಗ್ಗ | 7040 | 194.62 |
| 26 | ತುಮಕೂರು | 8154 | 223.66 |
| 27 | ಉಡುಪಿ | 3899 | 101.72 |
| 28 | ಉತ್ತರಕನ್ನಡ | 2962 | 72.36 |
| 29 | ವಿಜಯನಗರ | 2046 | 50.13 |
| 30 | ವಿಜಯಪುರ | 4237 | 104.78 |
| 31 | ಯಾದಗಿರಿ | 2295 | 55.54 |
| ಒಟ್ಟು | | 194061 | 5525.434 |

ಆಯುಕ್ತರು

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಬೆಂಗಳೂರು.

ಅನುಬಂಧ-2

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮದ ಮಾರ್ಗಸೂಚಿಗಳನ್ನು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ PM-YASASVI ಯೋಜನೆಯ ಮಾರ್ಗಸೂಚಿಗಳಂತೆ ಪರಿಷ್ಕರಿಸುವ ಕುರಿತು.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ: ಸಕಇ 160 ಬಿಎಂಎಸ್ 2012. ದಿನಾಂಕ:29.06.2012.
2. ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 620 ಬಿಎಂಎಸ್ 2014, ದಿನಾಂಕ:07.01.2015.
3. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ PM-YASASVI ಮಾರ್ಗಸೂಚಿಗಳು (2021-2022 ರಿಂದ 2025-2026)
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಪ್ರಸ್ತಾವನೆ ಸಂಖ್ಯೆ: BCWD-17014/5/2023-BCWD_SCHLR-BCWD ದಿನಾಂಕ:11.09.2023.

--------

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಆದೇಶದಲ್ಲಿ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ದೊರಕದ ಹಿಂದುಳಿದ ವರ್ಗಗಳ ಮೆಟ್ರಿಕ್-ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನದ ದರಗಳನ್ನು 5ರಿಂದ 7ನೇ ತರಗತಿಯವರೆಗೆ ರೂ.250/- ಹಾಗೂ 8 ರಿಂದ 10ನೇ ತರಗತಿಯ ಬಾಲಕರಿಗೆ ರೂ.500/- ಮತ್ತು ಬಾಲಕಿಯರಿಗೆ ರೂ.600/- ಗಳನ್ನು ವಾರ್ಷಿಕವಾಗಿ ಹೆಚ್ಚಿಸಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಪಡೆಯದ ಹಿಂದುಳಿದ ವರ್ಗಗಳ ಮೆಟ್ರಿಕ್-ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ದರಗಳನ್ನು 1 ರಿಂದ 5ನೇ ತರಗತಿಯವರೆಗೆ ರೂ.750/-, 6 ರಿಂದ 8ನೇ ತರಗತಿಯವರೆಗೆ ರೂ.900/- ಹಾಗೂ 9 ರಿಂದ 10ನೇ ತರಗತಿಯವರೆಗೆ ರೂ.1000/-ಗಳನ್ನು ವಾರ್ಷಿಕವಾಗಿ ಹೆಚ್ಚಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ (3)ರಲ್ಲಿ ಪ್ರಸ್ತುತ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು PM-YASASVI ಯೋಜನೆಯ (2021-2022 ರಿಂದ 2025-2026) ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮಕ್ಕೆ ನೀಡಲಾಗಿರುವ ಮಾರ್ಗಸೂಚಿಗಳನ್ನು ಬದಲಾಯಿಸಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ (4)ರ ಆಯುಕ್ತರ ಪ್ರಸ್ತಾವನೆಯಲ್ಲಿ ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಸ್ತುತ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು PM-YASASVI ಯೋಜನೆಯಡಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮಕ್ಕೆ ನೀಡಲಾಗಿರುವ ಮಾರ್ಗಸೂಚಿಗಳನ್ನು ಬದಲಾಯಿಸಿ ಆದೇಶ ಹೊರಡಿಸಲಾಗಿರುತ್ತದೆ

20/10/23

ಅದರಂತೆ ಕೇಂದ್ರ ಪುರಸ್ಕೃತ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮದ ಮಾರ್ಗಸೂಚಿಗಳನ್ನು ಬದಲಾವಣೆ ಮಾಡುವುದು ಅವಶ್ಯಕತೆಯಿದ್ದು, PM-YASASVI ಯೋಜನೆಯ ಮಾರ್ಗಸೂಚಿಗಳಂತೆ ಪರಿಷ್ಕರಿಸಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 444 ಬಿಎಂಎಸ್ 2023,**
**ಬೆಂಗಳೂರು, ದಿನಾಂಕ: 30.10.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮದ ಈ ಹಿಂದಿನ ಸರ್ಕಾರದ ಆದೇಶಗಳನ್ನು ನಿರಶನಗೊಳಿಸಿ, ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು ಹೊರಡಿಸಿರುವ PM-YASASVI ಯೋಜನೆಯ ಮಾರ್ಗಸೂಚಿಗಳಂತೆ ಪರಿಷ್ಕರಿಸಿ, ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಗಸೂಚಿಗಳಂತೆ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು ಜಾರಿಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/765/ವೆಚ್ಚ-3/2023, ದಿನಾಂಕ:20.10.2023ರಲ್ಲಿನ ಸಹಮತಿಯನ್ವಯ ಹಾಗೂ ಇಲಾಖಾ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

V. Akkamahadevi 30/10/23

**(ವಿ. ಅಕ್ಕಮಹಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-3) ವಿಧಾನಸೌಧ, ಬೆಂಗಳೂರು.
6. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
7. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು.

8. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು. (ಆಯುಕ್ತರ ಮುಖಾಂತರ)
9. ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು (ಆಯುಕ್ತರ ಮುಖಾಂತರ)
10. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು. (ಆಯುಕ್ತರ ಮುಖಾಂತರ)
11. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 444 ಬಿಎಂಎಸ್ 2023, ದಿನಾಂಕ:30.10.2023ಕ್ಕೆ

**ಅನುಬಂಧ**

**ಹಿಂದುಳಿದ ವರ್ಗಗಳ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮದ ಪರಿಷ್ಕೃತ ಮಾರ್ಗಸೂಚಿಗಳು**

**ಉದ್ದೇಶ**

ಮೆಟ್ರಿಕ್ ಪೂರ್ವ 9 ಮತ್ತು 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹಣಕಾಸು ನೆರವನ್ನು ಒದಗಿಸುವ ಮೂಲಕ ಈ ಪ್ರವರ್ಗಗಳಿಗೆ ಸೇರಿರುವ ಮಕ್ಕಳಲ್ಲಿ ಶೈಕ್ಷಣಿಕ ಉತ್ತೇಜನ ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿರುತ್ತದೆ.

**2. ವ್ಯಾಪ್ತಿ**

**2.1** ಈ ಯೋಜನೆಯ ಅಡಿ ರಾಜ್ಯದಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ 9 ಮತ್ತು 10ನೇ ತರಗತಿಯ ವಿದ್ಯಾರ್ಥಿಗಳು ಮಾತ್ರ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಿರುತ್ತಾರೆ.

**2.2** ಈ ವಿದ್ಯಾರ್ಥಿ ವೇತನವನ್ನು ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಮಾತ್ರ ನೀಡಲಾಗುತ್ತದೆ

**3. ಅರ್ಹತಾ ಷರತ್ತುಗಳು**

**3.1** ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾರತದ ಪ್ರಜೆಗಳಾಗಿರಬೇಕು ಮತ್ತು ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು.

**3.2** ಈ ವಿದ್ಯಾರ್ಥಿವೇತನ ಪಡೆಯಲು ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯದ ಮಿತಿ ರೂ. 2,50,000/- ಒಳಗೆ ಇರಬೇಕು .

**3.3** ವಿದ್ಯಾರ್ಥಿಗಳು ಪೂರ್ಣಕಾಲಿಕ ಆಧಾರದಲ್ಲಿ ಸರ್ಕಾರಿ ಶಾಲೆಗಳಲ್ಲಿ ಮಾತ್ರ 9 ಮತ್ತು 10ನೇ ತರಗತಿಗಳಲ್ಲಿ ಓದುತ್ತಿರಬೇಕು.

**3.4** ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿ ಗೆ ಸೇರಿದವರಾಗಿರಬೇಕು.

**3.5** ಹಿಂದಿನ ಶೈಕ್ಷಣಿಕ ವರ್ಷದಲ್ಲಿ A+, A ಮತ್ತು B+ ಮತ್ತು B ಗ್ರೇಡ್ ಗಳನ್ನು ಪಡೆದ ವಿದ್ಯಾರ್ಥಿಗಳು ಮಾತ್ರ ಈ ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ.

**3.6** ಈ ಯೋಜನೆಯ ಅಡಿಯಲ್ಲಿ ವಿದ್ಯಾರ್ಥಿ ವೇತನ ಪಡೆಯುವ ವಿದ್ಯಾರ್ಥಿಯು, 9 ಮತ್ತು 10ನೇ ತರಗತಿಯಲ್ಲಿ ಓದುವ ಉದ್ದೇಶಕ್ಕಾಗಿ ಇತರ ಯಾವುದೇ ಶೈಕ್ಷಣಿಕ ವಿದ್ಯಾರ್ಥಿ ವೇತನವನ್ನು ಪಡೆಯುವಂತಿಲ್ಲ. ವಿದ್ಯಾರ್ಥಿಗಳು 9 ಮತ್ತು 10ನೇ ತರಗತಿಯಲ್ಲಿ ಓದುತ್ತಿರುವ ಸಂಬಂಧವಾಗಿ ಇತರ ಯಾವುದೇ ಶೈಕ್ಷಣಿಕ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದ ಸಂದರ್ಭದಲ್ಲಿ, ತಮ್ಮ ಆಯ್ಕೆಯ ಅನುಸಾರ, ಎರಡು ವಿದ್ಯಾರ್ಥಿ ವೇತನಗಳ ಪೈಕಿ ಯಾವುದೇ ಒಂದರ ಪ್ರಯೋಜನ ಪಡೆಯಬಹುದು ಮತ್ತು ತಾವು ಮಾಡಿದ ಆಯ್ಕೆಯ ಬಗ್ಗೆ, ವಿದ್ಯಾರ್ಥಿ ವೇತನ ಮಂಜೂರಾತಿ ಪ್ರಾಧಿಕಾರಕ್ಕೆ, ಶಾಲೆಯ ಮುಖ್ಯಸ್ಥರಿಗೆ ಮಾಹಿತಿ ನೀಡಬೇಕು.

30/10/23

**3.7** ಆಧಾರ್ (ಉದ್ದೇಶಿತರಿಗೆ ಹಣಕಾಸು ಮತ್ತು ಇತರ ಸಹಾಯ ಧನ, ಪ್ರಯೋಜನಗಳು ಮತ್ತು ಸೇವೆಗಳ ನೀಡಿಕೆ) ಅಧಿನಿಯಮ, 2016 ರ 7ನೇ ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಅಧಿಸೂಚನೆ ಸಂ. 428, ದಿನಾಂಕ 16.02.2017 ರಲ್ಲಿ ನಿರೂಪಿಸಲಾದ ಷರತ್ತನ್ನು ಅನುಸರಿಸಬೇಕು; ಯಾವುದೇ ಕಾರಣದಿಂದಾಗಿ ಯಾರೇ ಅರ್ಜಿದಾರನ ಸಂಬಂಧದಲ್ಲಿ ಆಧಾರ್ ದೃಢೀಕರಣವು ವಿಫಲವಾದ ಸಂದರ್ಭದಲ್ಲಿ, ಅಂಥ ಅರ್ಜಿದಾರನು ತನ್ನ ಗುರುತನ್ನು ಇತರ ಯಾವುದೇ ಮೂಲಗಳಿಂದ ಸಾಬೀತುಪಡಿಸಲು ಅನುಮತಿಸಬೇಕು. ಆಧಾರ್ ಸಂಖ್ಯೆಯನ್ನು ಪ್ರವೇಶಾತಿ ಸಮಯದಲ್ಲಿ ಒದಗಿಸಿಲ್ಲದಿದ್ದಲ್ಲಿ, ನವೀಕರಣ ಸಮಯದಲ್ಲಿ ಆಧಾರ್ ದೃಢೀಕರಣ ಕಡ್ಡಾಯವಾಗಿರುತ್ತದೆ.

**3.8** ಆದಾಯ ಪ್ರಮಾಣಪತ್ರವನ್ನು ವಿದ್ಯಾರ್ಥಿಗಳಿಂದ ಒಮ್ಮೆ ಮಾತ್ರ, ಎಂದರೆ, ಕೋರ್ಸುಗಳಿಗೆ ಪ್ರವೇಶ ಪಡೆಯುವ ಸಮಯದಲ್ಲಿ ಮಾತ್ರ ಪಡೆದುಕೊಳ್ಳುವುದು.

**4. ವಿದ್ಯಾರ್ಥಿ ವೇತನದ ಮೊತ್ತ**

**4.1** ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ರೂ. 4000/- ಸಂಚಿತ ಶೈಕ್ಷಣಿಕ ಭತ್ಯೆ ನೀಡತಕ್ಕದ್ದು.

**5. ಅರ್ಜಿ ಸಲ್ಲಿಸುವ ವಿಧಾನ**

**5.1** ಎಲ್ಲಾ ಅರ್ಜಿಗಳನ್ನು ಅಗತ್ಯ ಪ್ರಮಾಣ ಪತ್ರಗಳೊಂದಿಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ನಿಗದಿತ ಅಂತಿಮ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

**5.2** ಭೌತಿಕ ರೂಪದ ಅರ್ಜಿ ಸಲ್ಲಿಸುವುದಕ್ಕೆ ಅವಕಾಶವಿರುವುದಿಲ್ಲ. ಭೌತಿಕ ಪರಿಶೀಲನೆಯನ್ನು ತಗ್ಗಿಸುವ ದೃಷ್ಟಿಯಿಂದ, ಎಲ್ಲಾ ಆನ್‌ಲೈನ್ ಅರ್ಜಿಗಳನ್ನು ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ದತ್ತಾಂಶ ಕಣಜಗಳೊಂದಿಗೆ ಸಂಪರ್ಕ ಕಲ್ಪಿಸುವ ಮೂಲಕ ಸ್ವಯಂ-ಪರಿಶೀಲನೆಗೊಳಪಡಿಸತಕ್ಕದ್ದು.

**5.3** ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಅಗತ್ಯವಿರುವ ಪ್ರಮಾಣ ಪತ್ರಗಳ ವಿವರಗಳನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ಪರಿಶೀಲಿಸುವುದು.

**6. ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಸುವಿಕೆ ಮತ್ತು ಅದರ ಪರಿಶೀಲನೆ**

**6.1** ಪ್ರವೇಶಾತಿ ದಿನದಂದು ಅರ್ಜಿ ಸಲ್ಲಿಸುವಿಕೆ: ಸಂಸ್ಥೆಗಳು/ಶಾಲೆಗಳು ತಮ್ಮಲ್ಲಿ ಪ್ರವೇಶ ಪಡೆದ ಎಲ್ಲಾ ವಿದ್ಯಾರ್ಥಿಗಳು ಪ್ರವೇಶ ಪಡೆದ ದಿನದಂದೇ ಇಲಾಖೆಯಿಂದ ಅರ್ಜಿ ಸಲ್ಲಿಸಲು ಪ್ರಕಟಣೆ ಹೊರಡಿಸಿದ ನಂತರ ಅರ್ಜಿ ಸಲ್ಲಿಸುವ ಬಗ್ಗೆ ಮಾಹಿತಿ ನೀಡುವುದು ವಿದ್ಯಾರ್ಥಿ ವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**6.2** ಸಂಸ್ಥೆಯು, ಪ್ರವೇಶಾತಿ ದಿನದಂದೇ, ವಿದ್ಯಾರ್ಥಿಯು ಸಂಸ್ಥೆಯಲ್ಲಿ ಪ್ರವೇಶ ಪಡೆದಿರುವುದನ್ನು ಮತ್ತು ಅವನು ಸಂಸ್ಥೆಯ ಅರ್ಹ ವಿದ್ಯಾರ್ಥಿಯಾಗಿರುವುದನ್ನು ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ ನಲ್ಲಿ ಪರಿಶೀಲಿಸತಕ್ಕದ್ದು.

30/10/23

**6.3** ವಿದ್ಯಾರ್ಥಿವೇತನ ನವೀಕರಣಗೊಳ್ಳುವ ವಿದ್ಯಾರ್ಥಿಗಳ ಸಂದರ್ಭದಲ್ಲಿ, ವಿದ್ಯಾರ್ಥಿಯ ಹಾಜರಾತಿ ಆಧಾರದ ಮೇಲೆ ಮತ್ತು ಆ ವಿದ್ಯಾರ್ಥಿಯು ಮುಂದಿನ ತರಗತಿಗೆ ತೇರ್ಗಡೆಗೊಂಡಿರುವುದಾಗಿ ಮತ್ತು ಶಾಲೆ/ಸಂಸ್ಥೆಗೆ ಪುನಃ ಸೇರಿರುವುದಾಗಿ ಸಂಸ್ಥೆಯು ಖಾತರಿಪಡಿಸಿದುದರ ಆಧಾರದ ಮೇಲೆ ಸ್ವಯಂ ನವೀಕರಣಗೊಳ್ಳತಕ್ಕದ್ದು.

**6.4** ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದವರು ವಿದ್ಯಾರ್ಥಿಗಳ ಅರ್ಹತೆ, ಆಧಾರ್ ದೃಢೀಕರಣ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ತಪ್ಪೆಸಗಲು ಆಸ್ಪದವಿಲ್ಲದಂತೆ ಪರಿಶೀಲಿಸತಕ್ಕದ್ದು.

## 7. ಅನುದಾನದ ಹಂಚಿಕೆ

ಆಯಾ ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಅನುದಾನವನ್ನು ಪ್ರವರ್ಗವಾರು ಈ ಕೆಳಗಿನಂತೆ ಶೇಕಡವಾರು ಹಂಚಿಕೆ ಮಾಡಬೇಕು.

9 ಮತ್ತು 10ನೇ ತರಗತಿಯ ಪ್ರವರ್ಗ-1 ರ ಎಲ್ಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿಸಲು ಕ್ರಮ ವಹಿಸುವುದು. ಮುಂದುವರೆದು ಉಳಿಕೆ ಅನುದಾನವನ್ನು ಈ ಕೆಳಕಂಡಂತೆ ಹಂಚಿಕೆ ಮಾಡಲಾಗುವುದು.

ಪ್ರವರ್ಗ-2ಎ - 63%
ಪ್ರವರ್ಗ-3ಎ – 16%
ಪ್ರವರ್ಗ-3ಬಿ – 20%
ಇತರೆ OBC- 01%
**ಒಟ್ಟು** –100%

**7.1** ಆ ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಅನುದಾನದ ಮಿತಿಗೆ ಒಳಪಟ್ಟು, ಅರ್ಹತೆ ಮತ್ತು ಆದಾಯಕ್ಕೆ ಅನುಗುಣವಾಗಿ ಮಂಜೂರು ಮಾಡಬೇಕು.

**7.2** ಆ ಆರ್ಥಿಕ ವರ್ಷದಲ್ಲಿ ಅನುದಾನದ ಕೊರತೆಯಾದ ಸಂದರ್ಭದಲ್ಲಿ ಈ ಕೆಳಕಂಡಂತೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.

**ಅ)** ನವೀಕರಣ ವಿದ್ಯಾರ್ಥಿಗಳಿಗೆ ಪ್ರಥಮ ಆದ್ಯತೆಯ ಮೇರೆಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.

**ಆ)** ಪ್ರವರ್ಗ-1ರ ಹೊಸ ವಿದ್ಯಾರ್ಥಿಗಳಿಗೆ ದ್ವಿತಿಯ ಆದ್ಯತೆಯ ಮೇರೆಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.

**ಇ)** ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ (ಹಿಂದಿನ ಶೈಕ್ಷಣಿಕ ವರ್ಷದಲ್ಲಿ A+, A, B+, B ಗ್ರೇಡ್ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ) ವಿದ್ಯಾರ್ಥಿವೇತನ ಮಂಜೂರು ಮಾಡುವುದು.

**7.3** ಕೇಂದ್ರ ಮತ್ತು ರಾಜ್ಯಗಳ ನಡುವೆ 60:40 ಅನುಪಾತದ ಪ್ರಮಾಣದಲ್ಲಿ ನಿಧಿ ಹಂಚಿಕೆಯಾಗುತ್ತದೆ.

**7.4** ಈ ಯೋಜನೆಗೆ ಅಗತ್ಯವಿರುವ ಅನುದಾನವನ್ನು ಕೇಂದ್ರ ಪುರಸ್ಕೃತ ಯೋಜನೆ- ಕೇಂದ್ರದ ಪಾಲು- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ರಾಜ್ಯ ವಲಯ ಲೆಕ್ಕ ಶೀರ್ಷಿಕೆ- 2225-03-277-2-52 (117) ಮತ್ತು ಕೇಂದ್ರ ಪುರಸ್ಕೃತ ಯೋಜನೆ- ರಾಜ್ಯದ ಪಾಲು- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ರಾಜ್ಯ ವಲಯ ಲೆಕ್ಕ ಶೀರ್ಷಿಕೆ- 2225-03-277-2-83 (117)ರಲ್ಲಿ ಬಿಡುಗಡೆಯಾಗುವ ಅನುದಾನದಲ್ಲಿ ಭರಿಸತಕ್ಕದ್ದು.

30/10/23

**8. ಮಂಜೂರಾತಿ ವಿಧಾನ**

**8.1** ವಿದ್ಯಾರ್ಥಿಯು ಆನ್ ಲೈನ್ ಮುಖಾಂತರ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿದ ನಂತರ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ತಮ್ಮ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ಸಲ್ಲಿಸಿರುವ ದಾಖಲಾತಿಗಳ ವಿವರಗಳನ್ನು ಪರಿಶೀಲಿಸುವುದು.

**8.2** ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾದಿಕಾರಿಗಳು ಪರಿಶೀಲಿಸಿದ ಅರ್ಜಿಗಳನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಮತ್ತೊಮ್ಮೆ ಪರಿಶೀಲಿಸಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಮೂಲಕ ಮಂಜೂರು ಮಾಡಲು ಕ್ರಮವಹಿಸುವುದು.

**8.3** ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಂದ ಮಂಜೂರಾತಿ ಪಡೆದ ವಿದ್ಯಾರ್ಥಿಗಳ ಆಧಾರ್ ಸೀಡ್ ಆಗಿರುವ ಬ್ಯಾಂಕ್ ಖಾತೆಗೆ ನೇರವಾಗಿ ಆಯುಕ್ತಾಲಯದಿಂದ ಹಣ ವರ್ಗಾವಣೆ ಮಾಡಲು ಕ್ರಮಕೈಗೊಳ್ಳುವುದು. ಸಹಾಯಕ ನಿರ್ದೇಶಕರು / ಅದಕ್ಕಿಂತಲೂ ಹೆಚ್ಚಿನ ದರ್ಜೆಯ ಅಧಿಕಾರಿ ಈ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡುವುದು

**8.4** ವಿದ್ಯಾರ್ಥಿವೇತನ ಪಾವತಿ ಸಂದರ್ಭದಲ್ಲಿ ಭಾರತ ಸರ್ಕಾರದ ವೆಚ್ಚ ಇಲಾಖೆ (MOF) ಯ ಅಧಿಕೃತ ಜ್ಞಾಪನ ಸಂ.1(13)/ಪಿಎಫ್‌ಎಂಎಸ್/ಎಫ್ ಸಿಡಿ/2020, ದಿನಾಂಕ:23.3.2021 ಕ್ಕೆ ಬದ್ಧವಾಗಿರತಕ್ಕದ್ದು.

**9. ಆಡಳಿತಾತ್ಮಕ ವೆಚ್ಚಗಳು**

**9.1** ಆಡಳಿತ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿನ ಆಡಳಿತಾತ್ಮಕ ವೆಚ್ಚವು ವಾರ್ಷಿಕ ಯೋಜನಾ ವೆಚ್ಚದ ಶೇಕಡಾ 1% ಕ್ಕೆ ಮಿತಿಗೊಳಿಸತಕ್ಕದ್ದು. ಈ ವೆಚ್ಚವನ್ನು ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪೋರ್ಟಲ್ ಅಭಿವೃದ್ಧಿ, ಸಾಮಾಜಿಕ ಲೆಕ್ಕ ಪರಿಶೋಧನೆಗಳನ್ನು ನಡೆಸುವಿಕೆ, ಪ್ರಚಾರ ಮತ್ತು ಜಾಗೃತಿ ಕಾರ್ಯಕ್ರಮ ಅಥವಾ ಯಾವುದೇ ಇತರೆ ಚಟುವಟಿಕೆಗಾಗಿ ಬಳಸಿಕೊಳ್ಳಬಹುದು.

**10. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ:**

**10.1** ವಿದ್ಯಾರ್ಥಿವೇತನ ಹಂಚಿಕೆಯಾದ ನಂತರ ರಾಜ್ಯ ಸರ್ಕಾರವು ಈ ಯೋಜನೆಯಡಿ ವಿದ್ಯಾರ್ಥಿವೇತನವನ್ನು ಪಡೆಯುತ್ತಿರುವ ತರಗತಿವಾರು ಮತ್ತು ಲಿಂಗವಾರುಗಳೆರಡರ ಫಲಾನುಭವಿಗಳ ಮಾಹಿತಿಯನ್ನು, ಪ್ರಸ್ತುತ ಹಣಕಾಸು ಪ್ರಸ್ತಾವಿಸಲಾದ ವೆಚ್ಚದ ವಿವರವನ್ನು ಮತ್ತು ಹಣಕಾಸು ವರ್ಷದ ಇತರ ವಿವರವನ್ನು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಗೆ ಸಲ್ಲಿಸುವುದು.

**11. ಕುಂದುಕೊರತೆಗಳ ಪರಿಹಾರ ವ್ಯವಸ್ಥೆ**

**11.1** ವಿದ್ಯಾರ್ಥಿ ವೇತನ ಪೋರ್ಟಲ್ ನಲ್ಲಿ, ಅನುಷ್ಠಾನದ ಹೊಣೆಗಾರಿಕೆಯುಳ್ಳ ಎಲ್ಲಾ ಪ್ರಾಧಿಕಾರಗಳನ್ನು ಸಂಪರ್ಕಿಸುವಂಥ ಆನ್‌ಲೈನ್ ಕುಂದುಕೊರತೆ ಪರಿಹಾರ ಕಾರ್ಯವ್ಯವಸ್ಥೆಯಿರತಕ್ಕದ್ದು.

**11.2** ವಿದ್ಯಾರ್ಥಿಯು ಪೋರ್ಟಲ್ ಮುಖಾಂತರ ಅಥವಾ ಮೊಬೈಲ್ ಆಪ್ ಮುಖಾಂತರ ಕುಂದುಕೊರತೆಯನ್ನು ದಾಖಲಿಸಲು ಅವಕಾಶವಿರತಕ್ಕದ್ದು.

30/10/23

**11.3** ಪ್ರತಿ ಸಂಸ್ಥೆಯು, ಕುಂದುಕೊರತೆಗಳನ್ನು ಸ್ವೀಕರಿಸುವುದಕ್ಕೆ ಮತ್ತು ಅವುಗಳನ್ನು ಸೂಕ್ತ ಪ್ರಾಧಿಕಾರದೊಂದಿಗೆ ವ್ಯವಹರಿಸಿ ಪರಿಹರಿಸುವುದಕ್ಕೆ ಬಾಧ್ಯನಾದ ಕುಂದುಕೊರತೆ ಪರಿಹಾರ ಅಧಿಕಾರಿ (ಜಿಆರ್‌ಓ) ಯನ್ನು ಹೊಂದಿರತಕ್ಕದ್ದು.

**11.4** ನಿರ್ದಿಷ್ಟ ಕಾಲಮಿತಿಯಲ್ಲಿ ಸಂಸ್ಥೆಯ ಮಟ್ಟದಲ್ಲಿ ಪರಿಹಾರವಾಗದಿರುವ ಕುಂದುಕೊರತೆಯನ್ನು ಪರಿಹರಿಸುವುದಕ್ಕಾಗಿ, ಸ್ವಯಂಚಾಲಿತವಾಗಿ ಜಿಲ್ಲಾ ಮಟ್ಟಕ್ಕೆ ಮತ್ತು ಆ ನಂತರ ರಾಜ್ಯ ಮಟ್ಟಕ್ಕೆ ಒಯ್ಯುವ ವ್ಯವಸ್ಥೆಯಿರತಕ್ಕದ್ದು.

**12. ಇತರ ಷರತ್ತುಗಳು**

**12.1** ವಿದ್ಯಾರ್ಥಿಯು ಶಾಲಾ ಶಿಸ್ತನ್ನು ಅಥವಾ ವಿದ್ಯಾರ್ಥಿ ವೇತನದ ಇತರ ಯಾವುದೇ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿದರೆ, ಸಕ್ಷಮ ಶಾಲಾ ಪ್ರಾಧಿಕಾರಕ್ಕೆ ಮನದಟ್ಟಾಗುವುದಕ್ಕೆ ಒಳಪಟ್ಟು, ಅಂಥ ವಿದ್ಯಾರ್ಥಿಯ ವಿದ್ಯಾರ್ಥಿವೇತನವನ್ನು ಅಮಾನತಿನಲ್ಲಿಡಬಹುದು ಅಥವಾ ರದ್ದುಗೊಳಿಸಬಹುದು.

**12.2** ವಿಶೇಷ ಸನ್ನಿವೇಶಗಳಲ್ಲಿ ಹೊರತುಪಡಿಸಿ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಹಿತದೃಷ್ಟಿಯಿಂದ, ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ವರ್ಷದ ಕೋರ್ಸಿನ ಅವಧಿಯಲ್ಲಿ ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ವಲಸೆ ಹೋಗುವುದಕ್ಕೆ ಅವಕಾಶವಿರುವುದಿಲ್ಲ.

**12.3** ಈ ಯೋಜನೆಯ ಅಡಿಯಲ್ಲಿ ಪ್ರಯೋಜನವನ್ನು ಪಡೆಯುವ ವಿದ್ಯಾರ್ಥಿಯು ಇತರ ಯಾವುದೇ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಯೋಜನೆಯ ಅಡಿಯಲ್ಲಿ ಪ್ರಯೋಜನವನ್ನು ಪಡೆಯಲು ಅವಕಾಶವಿರತಕ್ಕದ್ದಲ್ಲ.

**12.4** ಒಂದೇ ಕುಟುಂಬದ ಇಬ್ಬರು ಗಂಡು ಮಕ್ಕಳು ಮಾತ್ರ ಈ ಯೋಜನೆಗೆ ಅರ್ಹರು. ಆದರೆ ಈ ನಿರ್ಬಂಧ ಹೆಣ್ಣು ಮಕ್ಕಳಿಗೆ ಅನ್ವಯಿಸುವುದಿಲ್ಲ.

**12.5** ವಿದ್ಯಾರ್ಥಿವೇತನ ಪಡೆಯುವುದಕ್ಕಾಗಿ ಹಿಂದಿನ ವರ್ಷದಲ್ಲಿ ಶೇಕಡಾ 75% ಕ್ಕಿಂತ ಕಡಿಮೆಯಿರದಂತೆ ನಿಯಮಿತ ಹಾಜರಾತಿ ದಾಖಲೆಯು ಅಗತ್ಯವಾಗಿರುತ್ತದೆ.

**12.6** ವಿದ್ಯಾರ್ಥಿವೇತನಗಳ ಮಂಜೂರಾತಿಗಾಗಿ ಕನಿಷ್ಠ ಶೇಕಡಾ 5% ರಷ್ಟು ವಿಶೇಷಚೇತನ ವಿದ್ಯಾರ್ಥಿಗಳನ್ನು ಒಳಗೊಂಡಿರಬೇಕು. ಶೇಕಡಾ 30% ರಷ್ಟು ಫಲಾನುಭವಿಗಳು ವಿದ್ಯಾರ್ಥಿನಿಯರಾಗಿರಬೇಕು.

**12.7** ಅನಾರೋಗ್ಯದಿಂದ ವಾರ್ಷಿಕ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕು.

**12.8** ಅನುತ್ತೀರ್ಣ/ಮರು ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ಪಡೆಯಲು ಅವಕಾಶವಿರುವುದಿಲ್ಲ.

**12.9** ವಿದ್ಯಾರ್ಥಿಯು ತಪ್ಪು ವಿವರಗಳನ್ನು ನೀಡಿ ವಿದ್ಯಾರ್ಥಿವೇತನವನ್ನು ಪಡೆದಿರುವುದು ಕಂಡುಬಂದಲ್ಲಿ, ಅವನ/ಅವಳ ವಿದ್ಯಾರ್ಥಿವೇತನವನ್ನು ಆ ಕೂಡಲೇ ರದ್ದುಗೊಳಿಸಲಾಗುವುದು ಮತ್ತು ಸಂದಾಯ ಮಾಡಲಾಗಿರುವ ವಿದ್ಯಾರ್ಥಿ ವೇತನದ ಮೊತ್ತವನ್ನು ವಸೂಲು ಮಾಡಲಾಗುವುದು. ಸಂಬಂಧಪಟ್ಟ ವಿದ್ಯಾರ್ಥಿಯನ್ನು ಕಪ್ಪುಪಟ್ಟಿಗೆ ಸೇರಿಸಿ, ಮುಂದಿನ ಇತರ ಯಾವುದೇ ಯೋಜನೆಯಲ್ಲಿ ವಿದ್ಯಾರ್ಥಿವೇತನವನ್ನು ಪಡೆಯದಂತೆ ನಿಷೇಧಿಸಲಾಗುವುದು.

**12.10** ಈ ಯೋಜನೆಯ ಉಪಬಂಧಗಳು ರಾಜ್ಯ ಸರ್ಕಾರದ ವಿವೇಚನೆಗೆ ಅನುಸಾರವಾಗಿ ಯಾವುದೇ ಸಮಯದಲ್ಲಿ ಬದಲಾವಣೆ ಮಾಡಬಹುದು.

V. Akkamahadevi
30/10/23

**(ವಿ. ಅಕ್ಕಮಹಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದ ಮಾರ್ಗಸೂಚಿಗಳನ್ನು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ PM-YASASVI ಯೋಜನೆಯ ಮಾರ್ಗಸೂಚಿಗಳಂತೆ ಪರಿಷ್ಕರಿಸುವ ಕುರಿತು.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 518 ಬಿಎಂಎಸ್ 2013 ಬೆಂಗಳೂರು ದಿನಾಂಕ:03.09.2013.
2. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ PM-YASASVI ಮಾರ್ಗಸೂಚಿಗಳು (2021-2022 ರಿಂದ 2025-26).
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಪ್ರಸ್ತಾವನೆ ಸಂಖ್ಯೆ: BCWD-17015/10/2023-BCWD_SCHLR-BCWD ದಿನಾಂಕ:11.09.2023.

**ಪ್ರಸ್ತಾವನೆ:-**

ಮೇಲೆ ಓದಲಾದ (1)ರ ಆದೇಶದಲ್ಲಿ ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡುವ ಕುರಿತಂತೆ ಆದೇಶಿಸಲಾಗಿರುತ್ತದೆ. ಅದರಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ.

ಮೇಲೆ ಓದಲಾದ (2)ರಲ್ಲಿ ಪ್ರಸ್ತುತ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು PM-YASASVI ಯೋಜನೆಯ (2021-2022 ರಿಂದ 2025-2026) ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮಕ್ಕೆ ನೀಡಲಾಗಿರುವ ಮಾರ್ಗಸೂಚಿಗಳನ್ನು ಬದಲಾಯಿಸಿ ಆದೇಶ ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ (3)ರ ಆಯುಕ್ತರ ಪ್ರಸ್ತಾವನೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ518 ಬಿಎಂಎಸ್ 2013, ಬೆಂಗಳೂರು ದಿನಾಂಕ:03.09.2013ರ ಆದೇಶದಲ್ಲಿ ರಾಜ್ಯದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನವನ್ನು ಮಂಜೂರು ಮಾಡುವ ಕುರಿತಂತೆ ಆದೇಶಿಸಲಾಗಿರುತ್ತದೆ ಅದರಂತೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ.

ಪ್ರಸ್ತುತ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ PM-YASASVI ಮಾರ್ಗಸೂಚಿಗಳಲ್ಲಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು PM-YASASVI ಯೋಜನೆಯಡಿ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮಕ್ಕೆ ನೀಡಲಾಗಿರುವ ಮಾರ್ಗಸೂಚಿಗಳನ್ನು ಬದಲಾಯಿಸಿ ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ ಕೇಂದ್ರ ಪುರಸ್ಕೃತ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದ ಮಾರ್ಗಸೂಚಿಗಳನ್ನು ಬದಲಾವಣೆ ಮಾಡುವುದು ಅವಶ್ಯಕತೆಯಿದ್ದು, PM-YASASVI ಯೋಜನೆಯ ಮಾರ್ಗಸೂಚಿಗಳಂತೆ ಪರಿಷ್ಕರಿಸಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 445 ಬಿಎಂಎಸ್ 2023,**
**ಬೆಂಗಳೂರು, ದಿನಾಂಕ:08.11.2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದ ಈ ಹಿಂದಿನ

....2

08/11/23

ಸರ್ಕಾರದ ಆದೇಶಗಳನ್ನು ನಿರಶನಗೊಳಿಸಿ, ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು ಹೊರಡಿಸಿರುವ PM-YASASVI ಯೋಜನೆಯ ಮಾರ್ಗಸೂಚಿಗಳಂತೆ ಪರಿಷ್ಕರಿಸಿ, ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ರಲ್ಲಿರುವ ಮಾರ್ಗಸೂಚಿಗಳಂತೆ ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನದ ಕಾರ್ಯಕ್ರಮವನ್ನು ಜಾರಿಗೊಳಿಸಲು ಆದೇಶಿಸಿದೆ. ಗುಂಪುವಾರು ಕೋರ್ಸ್‌ಗಳ ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ/792/ವೆಚ್ಚ-3/ 2023, ದಿನಾಂಕ:20.10.2023ರಲ್ಲಿ ನೀಡಿರುವ ಸಹಮತಿಯನ್ವಯ ಹಾಗೂ ಇಲಾಖಾ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

V. Akkamahadevi 08/11/23

**(ವಿ. ಅಕ್ಕಮಹಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ), ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-3) ವಿಧಾನಸೌಧ, ಬೆಂಗಳೂರು.
7. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
8. ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.
9. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು.
10. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು.
11. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಅನುಬಂಧ-1**

**ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್-ನಂತರ ವಿದ್ಯಾರ್ಥಿವೇತನದ ಪರಿಷ್ಕೃತ ಮಾರ್ಗಸೂಚಿಗಳು**

**1. ಯೋಜನೆಯ ಉದ್ದೇಶ**

**1.1** ಯಾವುದೇ ಇಲಾಖೆಯ, ವಿದ್ಯಾರ್ಥಿನಿಲಯದಲ್ಲಿ/ ವಸತಿ ಕಾಲೇಜುಗಳಲ್ಲಿ, ಪ್ರವೇಶ ದೊರೆಯದ ಹಾಗೂ ಊಟ ಮತ್ತು ವಸತಿ ಸಹಾಯ ಯೋಜನೆಯಡಿ ಆಯ್ಕೆಯಾಗದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ಡೇ ಸ್ಕಾಲರ್ ವಿದ್ಯಾರ್ಥಿಗಳಿಗೆ, "ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ" ಸೌಲಭ್ಯವನ್ನು ನೀಡುವುದು ಈ ಯೋಜನೆಯ ಉದ್ದೇಶ.

**2. ಅರ್ಹತೆ**

**2.1** ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು.

**2.2** ಭಾರತ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಧಿಸೂಚಿರುವ. ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರಬೇಕು.

**2.3** ಕರ್ನಾಟಕದ ಶಾಸನಬದ್ಧ ವಿಶ್ವವಿದ್ಯಾಲಯಗಳ ಅಧೀನಕ್ಕೆ ಒಳಪಡುವ, ಸರ್ಕಾರಿ/ಸ್ಥಳೀಯ ಸಂಸ್ಥೆ/ಅನುದಾನಿತ ಸಂಸ್ಥೆಗಳು/ಮಾನ್ಯತೆ ಪಡೆದ ಅನುದಾನ ರಹಿತ ಖಾಸತಿ ಸಂಸ್ಥೆಗಳಲ್ಲಿ- ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಾಗಿರಬೇಕು.

2.4 ಈ ಸೌಲಭ್ಯ ಪಡೆಯಲು ವಿದ್ಯಾರ್ಥಿಯ, ತಂದೆ-ತಾಯಿ/ಪೋಷಕರ ಕುಟುಂಬದ, ಒಟ್ಟು ವಾರ್ಷಿಕ ವರಮಾನ ಪ್ರವರ್ಗ-1 ವಿದ್ಯಾರ್ಥಿಗಳಿಗೆ ರೂ.2.50 ಲಕ್ಷಗಳ ಮಿತಿಯೊಳಗೆ ಇರಬೇಕು. ಉಳಿದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ತಂದ-ತಾಯಿ /ಪೋಷಕರ ಕುಟುಂಬದ ಒಟ್ಟ ವಾರ್ಷಿಕ ವರಮಾನ ರೂ.1.00 ಲಕ್ಷಗಳ ಮಿತಿಯೊಳಗೆ ಇರಬೇಕು.

**2.5** ಸಮಾನ ಕೋರ್ಸುಗಳಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ವ್ಯಾಸಂಗ ಮಾಡುತ್ತಿದ್ದಲ್ಲಿ, ಅಂತಹವರು ಅರ್ಹರಿರುವುದಿಲ್ಲ. (ಉದಾ: ಬಿ.ಎ ನಂತರ ಬಿ.ಕಾಂ, ಎಂಎ (ಕನ್ನಡ) ನಂತರ ಎಂ.ಎ (ಇಂಗ್ಲೀಷ್), ಬಿ.ಎಡ್ ನಂತರ ಎಲ್.ಎಲ್.ಬಿ, ಇತ್ಯಾದಿಗಳಿಗೆ ಪ್ರವೇಶ ಪಡೆದಿದ್ದಲ್ಲಿ)

**2.6** ಮ್ಯಾನೇಜ್ಮೆಂಟ್ ಕೋಟಾದ ವಿದ್ಯಾರ್ಥಿಗಳು ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.

**2.7** ಈ ಯೋಜನೆ ಅಡಿಯಲ್ಲಿ ವಿದ್ಯಾರ್ಥಿವೇತನ ಪಡೆಯುತ್ತಿರುವವನು ಇತರ ಯಾವುದೇ ವಿದ್ಯಾರ್ಥಿವೇತನವನ್ನು/ಸ್ಟೈಪೆಂಡ್‌ನ್ನು ಪಡೆಯುವ ಹಾಗಿಲ್ಲ. ಇತರ ಯಾವುದೇ ವಿದ್ಯಾರ್ಥಿವೇತನ/ ಸ್ಟೈಪೆಂಡನ್ನು ನೀಡಿದ್ದರೆ, ವಿದ್ಯಾರ್ಥಿಗಳು ವಿದ್ಯಾರ್ಥಿವೇತನ/ಸ್ಟೈಪಂಡ್ ಇವೆರಡರಲ್ಲಿ, ಆತನಿಗೆ/ಆಕೆಗೆ ಯಾವುದೂ ಹೆಚ್ಚು ಪ್ರಯೋಜನಕಾರಿಯೋ ಅವುಗಳಲ್ಲಿ ಒಂದಕ್ಕೆ ಆತನ/ಆಕೆಯ ಆಯ್ಕೆಯನ್ನು ಚಲಾಯಿಸಬಹುದು ಮತ್ತು ಮಾಡಲಾದ ಆಯ್ಕೆಯ ಬಗ್ಗೆ ಸಂಸ್ಥೆಯ ಮುಖ್ಯಸ್ಥನ ಮೂಲಕ ನೀಡಿಕೆ ಪ್ರಾಧಿಕಾರಕ್ಕೆ ತಿಳಿಸಬೇಕು.

**2.8** ಕಲೆ, ವಿಜ್ಞಾನ, ಹಾಗೂ ವಾಣಿಜ್ಯ ಕೋರ್ಸುಗಳ, ಪದವಿ ಅಥವಾ ಸ್ನಾತಕೋತ್ತರ ಪದವಿಗಳಲ್ಲಿ ಉತ್ತೀರ್ಣ/ಅನುತ್ತೀರ್ಣರಾದವರು ಅಂಗೀಕೃತ ವೃತ್ತಿಪರ ಅಥವಾ ತಾಂತ್ರಿಕ ಸರ್ಟಿಫಿಕೇಟ್, ಡಿಪ್ಲೋಮ, ಪದವಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿದ್ದಲ್ಲಿ, ಹಾಗೂ ಇತರೆ ರೀತಿ ಅರ್ಹರಿದ್ದಲ್ಲಿ ಅವರು ಈ ಯೋಜನೆಯ ಅಡಿ ಸೌಲಭ್ಯಗಳಿಗೆ ಅರ್ಹರಿರುತ್ತಾರೆ. ಒಂದಕ್ಕಿಂತ ಹೆಚ್ಚು ಬಾರಿ ಕೋರ್ಸುಗಳ ಬದಲಾವಣೆ ಮಾಡಿಕೊಂಡವರು ಅರ್ಹರಿರುವುದಿಲ್ಲ.

08/11/23

**2.9** ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು, ಕೋರ್ಸಿನ ಅವಧಿಯಲ್ಲಿ ಮೆಡಿಕಲ್ ಪ್ರಾಕ್ಟೀಸ್ ಮಾಡುತ್ತಿದ್ದಲ್ಲಿ, ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

**2.10** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್-ನಂತರದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಅಥವಾ ಕೇಂದ್ರ ಪುರಸ್ಕೃತ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮಗಳಡಿಯಲ್ಲಿ ಯಾವುದಾದರೂ ಒಂದು ಯೋಜನೆಯಡಿ ಮಾತ್ರ ಫಲಾನುಭವಿಯಾಗಲು ಅರ್ಹರಿರುತ್ತಾರೆ.

**2.11** ಈ ಯೋಜನೆಯಡಿ ಪ್ರಥಮ ಬಾರಿಗೆ ಸೌಲಭ್ಯವನ್ನು ಪಡೆಯಲು, ಈ ಹಿಂದಿನ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ, ಈ ಕೆಳಗಿನಂತೆ ಕನಿಷ್ಠ ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

ಪ್ರವರ್ಗ-1:-50%
ಪ್ರವರ್ಗ-2ಎ, 3ಎ, 3ಬಿ:-60%.

ನವೀಕರಣ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕಾಗಿದ್ದಲ್ಲಿ, ಅವರು ಈ ಹಿಂದಿನ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಈ ಕೆಳಗಿನಂತೆ ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

ಪ್ರವರ್ಗ-1:-60%
ಪ್ರವರ್ಗ-2ಎ, 3ಎ, 3ಬಿ:-65%

**2.12** AISHE/UDISE ಕೋಡ್ ಹೊಂದಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮಾತ್ರ ಈ ಕಾರ್ಯಕ್ರಮದಡಿ ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ.

**2.13** ಒಂದೇ ಕುಟುಂಬದ ಇಬ್ಬರು ಗಂಡು ಮಕ್ಕಳು ಮಾತ್ರ ಈ ಯೋಜನೆಗೆ ಅರ್ಹರು. ಆದರೆ ಈ ನಿರ್ಬಂಧ ಹೆಣ್ಣು ಮಕ್ಕಳಿಗೆ ಅನ್ವಯಿಸುವುದಿಲ್ಲ.

**3. ಅರ್ಜಿ ಸಲ್ಲಿಸುವ ವಿಧಾನ**

**3.1** ಎಲ್ಲಾ ಅರ್ಜಿಗಳನ್ನು ಅಗತ್ಯ ಪ್ರಮಾಣಪತ್ರಗಳೊಂದಿಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ನಿಗದಿತ ಅಂತಿಮ ದಿನಾಂಕದೊಳಗೆ ಸಲ್ಲಿಸತಕ್ಕದ್ದು.

**3.2** ಭೌತಿಕ ರೂಪದ ಅರ್ಜಿ ಸಲ್ಲಿಸುವುದಕ್ಕೆ ಅವಕಾಶವಿರುವುದಿಲ್ಲ. ಭೌತಿಕ ಪರಿಶೀಲನೆಯನ್ನು ತಗ್ಗಿಸುವ ದೃಷ್ಟಿಯಿಂದ, ಎಲ್ಲಾ ಆನ್‌ಲೈನ್ ಅರ್ಜಿಗಳನ್ನು ಜಾತಿ ಮತ್ತು ಆದಾಯ ಪ್ರಮಾಣಪತ್ರಗಳ ದತ್ತಾಂಶ ಕಣಜಗಳೊಂದಿಗೆ ಸಂಪರ್ಕ ಕಲ್ಪಿಸುವ ಮೂಲಕ ಸ್ವಯಂ-ಪರಿಶೀಲನೆಗೊಳಪಡಿಸತಕ್ಕದ್ದು.

**3.3** ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಅಗತ್ಯವಿರುವ ಪ್ರಮಾಣಪತ್ರಗಳ ವಿವರಗಳನ್ನು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ಪರಿಶೀಲಿಸುವುದು.

**4. ಅನುದಾನ ಹಂಚಿಕೆ ವಿಧಾನ**

**4.1** ಆಯಾ ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಅನುದಾನದಲ್ಲಿ ನವೀಕರಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.

08/11/23

**4.2** ನವೀಕರಣ ವಿದ್ಯಾರ್ಥಿಗಳಿಗೆ ಮಂಜೂರು ಮಾಡಿ ಲಭ್ಯವಾಗುವ ಅನುದಾನವನ್ನು ಪ್ರವರ್ಗವಾರು ಈ ಕೆಳಗಿನಂತೆ ಶೇಕಡವಾರು ಹಂಚಿಕೆ ಮಾಡಬೇಕು.

ಪ್ರವರ್ಗ-1 ರ ಎಲ್ಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿಸಲು ಕ್ರಮ ವಹಿಸುವುದು. ಮುಂದುವರೆದು ಉಳಿಕೆ ಅನುದಾನವನ್ನು ಈ ಕೆಳಕಂಡಂತೆ ಹಂಚಿಕೆ ಮಾಡಲಾಗುವುದು.

ಪ್ರವರ್ಗ-2ಎ - 63%

ಪ್ರವರ್ಗ-3ಎ – 16%

ಪ್ರವರ್ಗ-3ಬಿ – 20%

ಇತರೆ OBC –01%

ಒಟ್ಟು – 100%

**4.3** ಆ ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಅನುದಾನದ ಮಿತಿಗೆ ಒಳಪಟ್ಟು ಅರ್ಹತೆ ಮತ್ತು ಆದಾಯಕ್ಕೆ ಅನುಗುಣವಾಗಿ ಮಂಜೂರು ಮಾಡಬೇಕು.

**4.4** ಮೇಲೆ ನಿಗದಿಪಡಿಸಿರುವ ಪ್ರವರ್ಗವಾರು ಮೀಸಲಾತಿ ಅನ್ವಯ ಈ ಕೆಳಕಂಡ ಆದ್ಯತೆಯ ಮೇರೆಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.

ಅ) ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರಥಮ ಆದ್ಯತೆ ಮೇರೆಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.

ಆ) ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ದ್ವಿತೀಯ ಆದ್ಯತೆ ಮೇರೆಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.

ಇ) ಉಳಿಕೆ ಅನುದಾನವನ್ನು ಅನುದಾನ ರಹಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರದಲ್ಲಿ ವಿದ್ಯಾರ್ಥಿವೇತನ ಮಂಜೂರು ಮಾಡುವುದು.

**4.4** ಕೇಂದ್ರ ಮತ್ತು ರಾಜ್ಯಗಳ ನಡುವೆ 60:40 ಅನುಪಾತದ ಪ್ರಮಾಣದಲ್ಲಿ ನಿಧಿ ಹಂಚಿಕೆಯಾಗುತ್ತದೆ.

**4.5** ಈ ಯೋಜನೆಗೆ ಅಗತ್ಯವಿರುವ ಅನುದಾನವನ್ನು ಕೇಂದ್ರ ಪುರಸ್ಕೃತ ಯೋಜನೆ- ಕೇಂದ್ರದ ಪಾಲು- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ರಾಜ್ಯ ವಲಯ ಲೆಕ್ಕ ಶೀರ್ಷಿಕೆ- 2225-03-277-2-72 (117) ಮತ್ತು ಕೇಂದ್ರ ಪುರಸ್ಕೃತ ಯೋಜನೆ- ರಾಜ್ಯದ ಪಾಲು- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ರಾಜ್ಯ ವಲಯ ಲೆಕ್ಕ ಶೀರ್ಷಿಕೆ- 2225-03-277-2-51 (117) ರಲ್ಲಿ ಬಿಡುಗಡೆಯಾಗುವ ಅನುದಾನದಲ್ಲಿ ಭರಿಸತಕ್ಕದ್ದು.

08/11/23

## 5.ವಿದ್ಯಾರ್ಥಿವೇತನ ದರಗಳು

| ಕೋರ್ಸುಗಳ ಪ್ರವರ್ಗ | ವಾರ್ಷಿಕವಾಗಿ (ರೂಪಾಯಿಗಳು) | | |
|---|---|---|---|
| | ಶೈಕ್ಷಣಿಕ ಭತ್ಯೆ | ಬೋಧನಾ ಶುಲ್ಕ | ಒಟ್ಟು |
| **ಗ್ರೂಪ್ - 1:** ಪದವಿ ಮತ್ತು ಸ್ನಾತಕೋತ್ತರ ಪದವಿ ಮಟ್ಟದ ವೃತ್ತಿಪರ ಕೋರ್ಸುಗಳು. | 10000 | 10000 | 20000 |
| **ಗ್ರೂಪ್ - 2:** ಪದವಿ, ಡಿಪ್ಲೋಮಾ, ಪ್ರಮಾಣಪತ್ರಕ್ಕೆ ಕಾರಣವಾಗುವ ಇತರ ವೃತ್ತಿಪರ ಕೋರ್ಸುಗಳು | 8000 | 5000 | 13000 |
| **ಗ್ರೂಪ್ - 3:** ಗ್ರೂಪ್ I ಮತ್ತು ಗ್ರೂಪ್ II ರಲ್ಲಿ ಒಳಗೊಳ್ಳದ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸುಗಳು. | 6000 | 2000 | 8000 |
| **ಗ್ರೂಪ್ - 4:** ಎಲ್ಲಾ ಮೆಟ್ರಿಕ್ಯೂಲೇಷನ್ ನಂತರದ (Xನೇ ತರಗತಿಯ ನಂತರದ ಮಟ್ಟ) ಪದವಿಯೇತರರ ಕೋರ್ಸುಗಳು. | 5000 | 0 | 5000 |

ಕೋರ್ಸುಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

## 6. ಮಂಜೂರಾತಿ ವಿಧಾನ

**6.1** ವಿದ್ಯಾರ್ಥಿಯು ಆನ್ ಲೈನ್ ಮುಖಾಂತರ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿದ ನಂತರ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ತಮ್ಮ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ಸಲ್ಲಿಸಿರುವ ದಾಖಲಾತಿಗಳ ವಿವರಗಳನ್ನು ಪರಿಶೀಲಿಸುವುದು.

**6.2** ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾದಿಕಾರಿಗಳು ಪರಿಶೀಲಿಸಿದ ಅರ್ಜಿಗಳನ್ನು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಮತ್ತೊಮ್ಮೆ ಪರಿಶೀಲಿಸಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಮೂಲಕ ಮಂಜೂರು ಮಾಡಲು ಕ್ರಮವಹಿಸುವುದು.

**6.3** ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಂದ ಮಂಜೂರಾತಿ ಪಡೆದ ವಿದ್ಯಾರ್ಥಿಗಳ ಆಧಾರ್ ಸೀಡ್ ಆಗಿರುವ ಬ್ಯಾಂಕ್ ಖಾತೆಗೆ ನೇರವಾಗಿ ಆಯುಕ್ತಾಲಯದಿಂದ ಹಣ ವರ್ಗಾವಣೆ ಮಾಡಲು ಕ್ರಮಕೈಗೊಳ್ಳುವುದು. ಸಹಾಯಕ ನಿರ್ದೇಶಕರು/ ಅದಕ್ಕಿಂತಲೂ ಹೆಚ್ಚಿನ ದರ್ಜೆಯ ಅಧಿಕಾರಿ ಈ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡುವುದು.

**6.4** ವಿದ್ಯಾರ್ಥಿವೇತನ ಪಾವತಿ ಸಂದರ್ಭದಲ್ಲಿ ಭಾರತ ಸರ್ಕಾರದ ವೆಚ್ಚ ಇಲಾಖೆ (MOF) ಯ ಅಧಿಕೃತ ಜ್ಞಾಪನ ಸಂ.1 (13)/ಪಿಎಫ್ಎಂಎಸ್/ಎಫ್ ಸಿಡಿ/2020, ದಿನಾಂಕ:23.3.2021 ಕ್ಕೆ ಬದ್ಧವಾಗಿರತಕ್ಕದ್ದು.

08/11/23

**7. ಆಡಳಿತಾತ್ಮಕ ವೆಚ್ಚಗಳು**

**7.1** ಆಡಳಿತ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿನ ಆಡಳಿತಾತ್ಮಕ ವೆಚ್ಚವು ವಾರ್ಷಿಕ ಯೋಜನಾ ವೆಚ್ಚದ ಶೇಕಡಾ 1% ಕ್ಕೆ ಮಿತಿಗೊಳಿಸತಕ್ಕದ್ದು. ಈ ವೆಚ್ಚವನ್ನು ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಪೋರ್ಟಲ್ ಅಭಿವೃದ್ಧಿ, ಸಾಮಾಜಿಕ ಲೆಕ್ಕ ಪರಿಶೋಧನೆಗಳನ್ನು ನಡೆಸುವಿಕೆ, ಪ್ರಚಾರ ಮತ್ತು ಜಾಗೃತಿ ಕಾರ್ಯಕ್ರಮ ಅಥವಾ ಯಾವುದೇ ಇತರೆ ಚಟುವಟಿಕೆಗಾಗಿ ಬಳಸಿಕೊಳ್ಳಬಹುದು.

**8. ಇತರೆ**

**8.1** ವಿದ್ಯಾರ್ಥಿಯು ಕಾಲೇಜು/ಶೈಕ್ಷಣಿಕ ಸಂಸ್ಥೆಗಳ ಶಿಸ್ತನ್ನು ಅಥವಾ ವಿದ್ಯಾರ್ಥಿ ವೇತನದ ಇತರ ಯಾವುದೇ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿದರೆ, ಸಕ್ಷಮ ಶೈಕ್ಷಣಿಕ ಪ್ರಾಧಿಕಾರಕ್ಕೆ ಮನದಟ್ಟಾಗುವುದಕ್ಕೆ ಒಳಪಟ್ಟು, ಅಂಥ ವಿದ್ಯಾರ್ಥಿಯ ವಿದ್ಯಾರ್ಥಿವೇತನವನ್ನು ಅಮಾನತಿನಲ್ಲಿಡಬಹುದು ಅಥವಾ ರದ್ದುಗೊಳಿಸಬಹುದು.

**8.2** ವಿಶೇಷ ಸನ್ನಿವೇಶಗಳಲ್ಲಿ ಹೊರತುಪಡಿಸಿ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಹಿತದೃಷ್ಟಿಯಿಂದ, ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ವರ್ಷದ ಕೋರ್ಸಿನ ಅವಧಿಯಲ್ಲಿ, ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ವಲಸೆ ಹೋಗುವುದಕ್ಕೆ ಅವಕಾಶವಿರುವುದಿಲ್ಲ.

**8.3** ಈ ಯೋಜನೆಯ ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯುವ ವಿದ್ಯಾರ್ಥಿಯು ಇತರ ಯಾವುದೇ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಯೋಜನೆಯ ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯಲು ಅವಕಾಶವಿರತಕ್ಕದ್ದಲ್ಲ.

**8.4** ಒಂದೇ ಕುಟುಂಬದ ಇಬ್ಬರು ಗಂಡು ಮಕ್ಕಳು ಮಾತ್ರ ಈ ಯೋಜನೆಗೆ ಅರ್ಹರು. ಆದರೆ ಈ ನಿರ್ಬಂಧ ಹೆಣ್ಣು ಮಕ್ಕಳಿಗೆ ಅನ್ವಯಿಸುವುದಿಲ್ಲ.

**8.5** ವಿದ್ಯಾರ್ಥಿವೇತನ ಪಡೆಯುವುದಕ್ಕಾಗಿ ಹಿಂದಿನ ವರ್ಷದಲ್ಲಿ ಶೇಕಡಾ 75%ಕ್ಕಿಂತ ಕಡಿಮೆಯಿರದಂತೆ ನಿಯಮಿತ ಹಾಜರಾತಿ ದಾಖಲೆಯು ಅಗತ್ಯವಾಗಿರುತ್ತದೆ.

**8.6** ವಿದ್ಯಾರ್ಥಿವೇತನಗಳ ಮಂಜೂರಾತಿಗಾಗಿ ಕನಿಷ್ಠ ಶೇಕಡಾ 5% ರಷ್ಟು ವಿಶೇಷಚೇತನ ವಿದ್ಯಾರ್ಥಿಗಳನ್ನು ಒಳಗೊಂಡಿರಬೇಕು. ಶೇಕಡಾ 30% ರಷ್ಟು ಫಲಾನುಭವಿಗಳು ವಿದ್ಯಾರ್ಥಿನಿಯರಾಗಿರಬೇಕು.

**8.7** ವಿದ್ಯಾರ್ಥಿಯು ತಪ್ಪು ವಿವರಗಳನ್ನು ನೀಡಿ ವಿದ್ಯಾರ್ಥಿವೇತನವನ್ನು ಪಡೆದಿರುವುದು ಕಂಡುಬಂದಲ್ಲಿ, ಅವನ/ಅವಳ ವಿದ್ಯಾರ್ಥಿವೇತನವನ್ನು ಆ ಕೂಡಲೇ ರದ್ದುಗೊಳಿಸಲಾಗುವುದು ಮತ್ತು ಸಂದಾಯ ಮಾಡಲಾಗಿರುವ ವಿದ್ಯಾರ್ಥಿ ವೇತನದ ಮೊತ್ತವನ್ನು ವಸೂಲು ಮಾಡಲಾಗುವುದು. ಸಂಬಂಧಪಟ್ಟ ವಿದ್ಯಾರ್ಥಿಯನ್ನು ಕಪ್ಪುಪಟ್ಟಿಗೆ ಸೇರಿಸಿ, ಮುಂದಿನ ಇತರ ಯಾವುದೇ ಯೋಜನೆಯಲ್ಲಿ ವಿದ್ಯಾರ್ಥಿವೇತನವನ್ನು ಪಡೆಯದಂತೆ ನಿಷೇಧಿಸಲಾಗುವುದು.

**8.8** ಈ ಯೋಜನೆಯ ಉಪಬಂಧಗಳು ರಾಜ್ಯ ಸರ್ಕಾರದ ವಿವೇಚನೆಗೆ ಅನುಸಾರವಾಗಿ ಯಾವುದೇ ಸಮಯದಲ್ಲಿ ಬದಲಾವಣೆ ಮಾಡಬಹುದು.

V. Akkamahadevi 08/11/23

**(ವಿ. ಅಕ್ಕಮಹಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 445 ಬಿಎಂಎಸ್ 2023, ದಿನಾಂಕ:08.11.2023ಕ್ಕೆ,

# ಅನುಬಂಧ-2

## Group-A

i) Degree and Post Graduate level courses including M.Phil.. P.hD., and Post Doctoral research in Medicine (Alltopathic. Indian and other recognized systems of medicines). Engineering. Technology, Planning. Architecture Design. Fashion Technology. Agriculture. Veterinary & Allied Sciences. Management. Business Finance / Adminisiration. Computer Science/Applications.

ii) Post Graduate Diploma courses in various branche of Management & medicine.

iii) CA/I.C.W.A/C.S./I.C.F.A etc.,

iv) M.Phil.. Ph.D and Post Doctoral Programmes (D.Litt.. D.Sc.. etc)

v) L.L.M.

## Group-B

i) Graduate/Post graduate courses leading to Degree. Diploma. Certificate in areas like Pharmacy (B.Pharma.). Nursing(B Nursing) L.L.B. BFS. other Paramedical branches like rehabiliation. diagnostics etc.. Mass Communication. Hotel Management & Catering. Travel/Toursim/Hospitality Management. Interior Decoration. Nutrition & Dietetics. Commercial Art. Financial Service (e.g Banking. Insurance. Taxation etc.) for which entrance qualification is minimum Sr. Secondary (10+2).

ii) Post Graduate courses not covered under Group A e.g. MA/M.sc../M.Com/M.Ed../M.Pharma.. etc..

## Group-C

All other courses leading to a graduate degree not covered under Group A & Group A & B e.g. BA/B.sc../ B.Com etc.,

## Group-D

All post-matriculation level non-degree courses for which entrance qualification is high School (Class X) both general and vocational stream. ITI courses. 3 year diploma courses in Polytechnics. etc.

V. Akkamahadevi 08/11/23

(ವಿ. ಅಕ್ಕಮಹಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.